

بسم الله الرّحمٰن الرّحيم

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **27–08–2021** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ.

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರಿಗೆ ಸಂಬಂಧಿಸಿದ ಘಟನೆಗಳ ಪ್ರಸ್ತಾಪ ನಡೆಯುತ್ತಿದೆ. ಅವರ ಕಾಲದಲ್ಲಿ **"ರಯೇ"** ಎಂದು ಕರೆಯಲ್ಪಡುವ ಒಂದು ಯುದ್ಧ ನಡೆಯಿತು. ರಯೇ ನೀಶಾಪೂರಿನಿಂದ 480 ಮೈಲುಗಳಷ್ಟು ದೂರದಲ್ಲಿದೆ. ರೇಯ ನಿವಾಸಿಗಳನ್ನು ರಾಝಿ ಎಂದು ಕರೆಯಲಾಗುತ್ತದೆ. ಪ್ರಸಿದ್ಧ ವ್ಯಾಖ್ಯಾನಗಾರ ಹಝ್ರತ್ ಇಮಾಂ ಫಖ್ರುದ್ದೀನ್ ರಾಝಿ ರೇ ನಿವಾಸಿಯಾಗಿದ್ದರು. ರೇಯ ಅಧಿಕಾರಿ ಸಿಯಾಯೋಖಶ್ ಬಿನ್ ಮಹ್‌ರಾನ್ ಬಿನ್ ಬಹ್‌ರಾಂ ಆಗಿದ್ದರು. ಅವರು ದುಂಬಾವಂದ್, ತಿಬರಿಸ್ತಾನ್, ಖೋಮಸ್ ಮತ್ತು ಜರ್ಜಾನ್‌ನವರನ್ನು ತನ್ನ ಸಹಾಯಕ್ಕಾಗಿ ತಯಾರಿ ಮಾಡಿದನು. ಮುಸ್ಲಿಮರು ರೇಯ ರಸ್ತೆಯಲ್ಲಿರುವಾಗಲೇ ಇರಾನಿನ ಸರದಾರ ಅಬುಲ್‌ಫರ್‌ಖಾನ್ ಝೈನಬಿ ಮೈತ್ರಿ ಮಾಡುವ ಉದ್ದೇಶದಿಂದ ಮುಸ್ಲಿಮರನ್ನು ಭೇಟಿ ಮಾಡಿದನು. ನಈಂ ಬಿನ್ ಮಖ್‌ರನ್‌ರೊಡನೆ ಝೈನಬಿ ಹೇಳಿದನು: ನೀವು ನನ್ನೊಂದಿಗೆ ಕೆಲವು ಕುದುರೆಸವಾರರನ್ನು ಕಳುಹಿಸಿರಿ. ನಾನು ರಹಸ್ಯ ರಸ್ತೆಯಲ್ಲಿ ಪಟ್ಟಣದ ಒಳಗೆ ಹೋಗುತ್ತೇನೆ. ಹಾಗೆ ಝೈನಬಿಯ ಸಹಾಯದಿಂದ ಮುಸ್ಲಿಮರು ಪಟ್ಟಣದಲ್ಲಿ ರಹಸ್ಯವಾಗಿ ಪ್ರವೇಶಿಸಿದರು ಮತ್ತು ಹೀಗೆ ಈ ಪಟ್ಟಣವನ್ನು ಮುಸ್ಲಿಮರು ವಶಪಡಿಸಿದರು. ಪಟ್ಟಣದ ನಿವಾಸಿಗಳಿಗೆ ಲಿಖಿತವಾಗಿ ಅಭಯವನ್ನು ನೀಡಲಾಯಿತು.

ಅನಂತರ ಹಿಜರೀ 22ರಲ್ಲಿ ಖೋಮೇಸ್ ಮತ್ತು ಜರ್ಜಾನ್ ಮೇಲೆ ವಿಜಯ ಸಾಧಿಸಲಾಯಿತು. ಹಿಜರೀ 22ರಲ್ಲೇ ಆಝುರ್‌ಬೈಜಾನ್ ವಿಜಯ ಸಹ ನಡೆಯಿತು. ಹಝ್ರತ್ ಉಮರ್‌ರ ವತಿಯಿಂದ ಆಝುರ್‌ಬೈಜಾನಿನ ಯುದ್ಧದ ಧ್ವಜ ಉತ್ಬ ಬಿನ್ ಫರ್ಖದ್ ಮತ್ತು ಬುಕೇರ್ ಬಿನ್ ಅಬ್ದುಲ್ಲಾಹ್‌ರಿಗೆ ನೀಡಲಾಯಿತು. ಹಝ್ರತ್ ಉಮರ್(ರ)ರ ನಿರ್ದೇಶನದಲ್ಲೇ ಇವರಿಬ್ಬರೂ ಬೇರೆ ಬೇರೆ ಕಡೆಗಳಿಂದ ದಾಳಿ ನಡೆಸಿದರು. ಬುಕೇರ್ ಮತ್ತು ರುಸ್ತಮಿನ ಸಹೋದರ ಇಸ್‌ಫಂದರ್‌ಯಾಧ್ ಬಿನ್ ಫರಖ್‌ಝಾದ್ ಮುಖಾಮುಖಿಯಾದರು. ಯುದ್ಧ ನಡೆಯಿತು. ಇಸ್‌ಫಂದರ್‌ಯಾಧ್ ಪರಾಜಯಗೊಂಡು ಬಂಧಿಸಲ್ಪಟ್ಟಾಗ ಅವನು ಬುಕೇರ್‌ನೊಂದಿಗೆ ಸಂಧಾನ ಮಾಡಿದನು. ಅವನು ಬುಕೇರಿನ ಪ್ರತಿನಿಧಿಯಾಗಿ ಎದುರಾಳಿಗಳ ವಿರುದ್ಧ ಮುಸ್ಲಿಮರಿಗೆ ನೆರವು ನೀಡುತ್ತಿದ್ದನು. ಹೀಗೆ ಮೆಲ್ಲಮೆಲ್ಲನೇ ಸಂಪೂರ್ಣ ಪ್ರದೇಶ ಬುಕೇರಿನ ಅಧಿಕಾರದಲ್ಲಿ ಬಂತು. ಮತ್ತೊಂದೆಡೆ ಉತ್ಬ ಬಿನ್ ಫರ್ಖದ್ ಸಹ ವಿಜಯ ಸಾಧಿಸಿದರು. ವಿಜಯಗಳ ಈ ಪರಂಪರೆಯ ನಂತರ ಅಮೀರುಲ್ ಮುಅ್‌ಮಿನೀನ್ ಉಮರ್ ಬಿನ್ ಖತ್ತಾಬ್(ರ) ನಿಯೋಗಿಸಿದ ಅಧಿಕಾರಿಯಾದ ಉತ್ಬ ಬಿನ್ ಫರ್ಖದ್ ವತಿಯಿಂದ ಅಝುರ್‌ಬೈಜಾನ್ ನಿವಾಸಿಗಳಿಗೆ ಸಂಧಾನದ ಪತ್ರ ಬರೆಯಲಾಯಿತು.

ಅಝುರ್‌ಬೈಜಾನ್‌ನ ವಿಜಯದ ನಂತರ ಬುಕೇರ್ ಬಿನ್ ಅಬ್ದುಲ್ಲಾಹ್ ಆರ್ಮೇನಿಯದ ಕಡೆಗೆ ಹೋದರು. ಅವರ ನೆರವಿಗಾಗಿ ಸುರಾಖ ಬಿನ್ ಮಾಲಿಕ್‌ರ ನೇತೃತ್ವದಲ್ಲಿ ಹೆಚ್ಚಿನ ಒಂದು ಸೈನ್ಯವನ್ನು ಹಝ್ರತ್ ಉಮರ್(ರ) ರವಾನೆ ಮಾಡಿದರು. ಸುರಾಖ ಬಿನ್ ಮಾಲಿಕ್‌ರನ್ನು ಸಂಪೂರ್ಣ ಸೈನ್ಯದ ಸೇನಾಧಿಪತಿಯನ್ನಾಗಿಯೂ ನಿಶ್ಚಯಿಸಿದರು. ಮುಸ್ಲಿಮರ ಬರುವಿಕೆ ಮತ್ತು ನಿರ್ಧಾರಗಳನ್ನು ನೋಡಿ ಬರಾಝ್ ಪಟ್ಟಣದ ಅಧಿಕಾರಿಯು ಸುರಾಖ ಬಿನ್ ಮಾಲಿಕ್‌ರೊಡನೆ ಜಿಝಿಯದ ಬದಲಾಗಿ ಸೈನ್ಯಬಲದ ನೆರವು ನೀಡುವುದೆಂಬ ಶರತ್ತಿನ ಮೇಲೆ ಸಂಧಾನ ಮಾಡಿದನು. ಹೀಗೆ ಆರ್ಮೇನಿಯದ ಮೇಲೆ ಯುದ್ಧ ನಡೆಯದೇ ವಿಜಯ ಸಾಧಿಸಲಾಯಿತು. ಹಝ್ರತ್ ಉಮರ್(ರ) ಈ ಸಂಧಾನದ ಬಗ್ಗೆ ಸಂತೋಷ ವ್ಯಕ್ತಪಡಿಸಿದರು. ಇದರ ನಂತರ ಆರ್ಮೇನಿಯದ ಸುತ್ತಮುತ್ತ ಇರುವ ಪರ್ವತ ಪ್ರದೇಶಗಳ ಕಡೆಗೆ ಸುರಾಖ ಬಿನ್ ಮಾಲಿಕ್ ಸೈನ್ಯಗಳನ್ನು ಕಳುಹಿಸಿದರು. ಅದರಲ್ಲಿ ಅವರಿಗೆ ಪ್ರಚಂಡ ವಿಜಯಗಳು ಲಭಿಸಿದುವು.

ಹಿಜರೀ 22ರಲ್ಲಿ ಖರಾಸಾನ್ ವಿಜಯ ನಡೆಯಿತು. ಜಲೂಲ ಯುದ್ಧದ ನಂತರ ಯಝ್‌ದಜರ್ದ್ ರೇನಲ್ಲಿ, ಅನಂತರ ಕಿರ್ಮಾನ್, ಖರಾಸಾನ್ ಮತ್ತು ಮರೂನಲ್ಲಿ ನೆಲೆಸಿದನು. ಇಲ್ಲಿ ಅವನು ಸುತ್ತಮುತ್ತಲಿನ ಅರೇಬಿಯೇತರ ನಿವಾಸಿಗಳೊಡನೆ ಮತ್ತು ಪರ್ಶಿಯ ಹಾಗೂ ಹರ್ಮುಝಾನಿನ ನಿವಾಸಿಗಳೊಡನೆ ಸಂಬಂಧ ವರ್ಧಿಸಿಕೊಂಡು ಮುಸ್ಲಿಮರ ವಿರುದ್ಧ ಉದ್ರೇಕಿಸಿದನು ಮತ್ತು ಕೊನೆಗೆ ಮುಸ್ಲಿಮರು ಜಯಿಸಿದ ಪ್ರದೇಶಗಳಲ್ಲಿ ದಂಗೆಯೆಬ್ಬಿಸಿದನು. ಈ ಸ್ಥಿತಿಗತಿಗಳ ತೀವ್ರತೆಯ ಕಾರಣದಿಂದ ಇರಾನಿನ ಪ್ರದೇಶಗಳಿಗೆ ಹೋಗಲು ಹಝ್ರತ್ ಉಮರ್(ರ) ಮುಸ್ಲಿಮರಿಗೆ ಅನುಮತಿ ಕೊಟ್ಟರು. ಅವರ ಆದೇಶದ ಮೇರೆಗೆ ಬಸ್ರ ಮತ್ತು ಕೂಫದ ನಿವಾಸಿಗಳು ತೀವ್ರವಾಗಿ ದಾಳಿ ನಡೆಸಿ ಇರಾನಿನ ಅರಸನಾದ ಯಝ್‌ದಜರ್‌ದನನ್ನು ಪದೇ ಪದೇ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಪಲಾಯನ ಮಾಡುವಂತೆ ಮಾಡಿದರು. ಈ ಹೊಸ ಸ್ಥಿತಿಗತಿಯಲ್ಲಿ ನೀಶಾಪುರ್‌ನಿಂದ ತಖಾರಿಸ್ತಾನಿನ ತನಕದ ನಿವಾಸಿಗಳು ಮುಸ್ಲಿಮರೊಡನೆ ರಾಜಿ

ಮಾಡಿಕೊಂಡರು. ಹಝ್ರತ್ ಉಮರ್(ರ)ರಿಗೆ ಖುರಾಸಾನ್ ವಿಜಯದ ಸುದ್ದಿ ಲಭಿಸಿದಾಗ ಅವರು ಹೇಳಿದರು: "ಈ ಇರಾನಿಯರ ವಿರುದ್ಧ ದಾಳಿ ನಡೆಸಬೇಕಾದ ಸನ್ನಿವೇಶ ಉಂಟಾಗದಿರಲಿ ಮತ್ತು ನಮ್ಮ ಹಾಗೂ ಅವರ ನಡುವೆ ಬೆಂಕಿಯ ಸಮುದ್ರ ತಡೆಯಾಗಿ ನಿಲ್ಲಲಿ ಎಂದು ನಾನು ಬಯಸಿದ್ದೆ." ಆದ್ದರಿಂದಲೇ ಅವರು ಅಹ್‌ನಫ್ ಬಿನ್ ಖೈಸ್‌ರನ್ನು ನದಿ ದಾಟಿ ದಾಳಿ ನಡೆಸುವುದರಿಂದ ತಡೆದಿದ್ದರು. ಇತ್ತ ಯಝ್‌ದಜರ್ದ್ ಅನೇಕ ಪಟ್ಟಣಗಳಲ್ಲಿ ಸುತ್ತುತ್ತಿದ್ದನು. ಕೊನೆಗೆ ಹಝ್ರತ್ ಉಸ್ಮಾನ್(ರ)ರ ಖಿಲಾಫತ್ ಕಾಲದಲ್ಲಿ ಕೊಲ್ಲಲ್ಪಟ್ಟನು.

ಅಹ್‌ನಫ್ ಬಿನ್ ಖೈಸ್‌ರ ಕಡೆಯಿಂದ ಲಭಿಸುತ್ತಿದ್ದ ಯುದ್ಧ ಸಂಪತ್ತಿನ ಕುರಿತು ಹಝ್ರತ್ ಉಮರ್(ರ) ಮುಸ್ಲಿಮರೊಡನೆ ನೋವುಭರಿತ ಭಾಷಣ ಮಾಡಿದರು. ಅದರಲ್ಲಿ ಅಲ್ಲಾಹನನ್ನು ಅನುಸರಿಸದೇ ಇರುವುದರಿಂದ ಉಂಟಾಗುವ ಪರಿಣಾಮಗಳ ಬಗ್ಗೆ ಎಚ್ಚರಿಸುತ್ತಾ ಹೀಗೆ ಹೇಳಿದರು: ಶತ್ರುಗಳು ಮುಸ್ಲಿಂ ಸಮುದಾಯವನ್ನು ನಾಶಪಡಿಸುವರು ಎಂಬ ಭಯ ನನಗಿಲ್ಲ. ಬದಲಾಗಿ ನೀವು ಮುಸ್ಲಿಮರಿಂದಲೇ ಮುಸ್ಲಿಂ ಸಮುದಾಯ ನಾಶವಾಗುವುದು ಎಂಬ ಭಯವಿದೆ. (ಹುಝೂರ್ ಹೇಳಿದರು:) ಇಂದು ಈ ಮಾತು ಸತ್ಯವಾದದ್ದು ನಾವು ನೋಡುತ್ತಿದ್ದೇವೆ. ಮುಸ್ಲಿಮರೇ ಮುಸ್ಲಿಮರನ್ನು ಕೊಲ್ಲುತ್ತಿದ್ದಾರೆ. ಒಂದು ದೇಶ ಮತ್ತೊಂದು ದೇಶದ ಮೇಲೆ ಜಿಹಾದಿನ ಹೆಸರಲ್ಲಿ ಆಕ್ರಮಣ ನಡೆಸುತ್ತಿದೆ.

ಪರ್ಶಿಯದ ಮುಖ್ಯ ಪಟ್ಟಣ ಮತ್ತು ಸಾಸಾನಿ ಅರಸರ ಪರಿಶುದ್ಧ ಸ್ಥಳವಾದ ಅಸ್‌ತಖ್‌ರ್‌ನ ಪ್ರದೇಶಗಳ ಕಡೆಗೆ ಹಝ್ರತ್ ಉಸ್ಮಾನ್ ಬಿನ್ ಅಬುಲ್‌ಆಸ್(ರ) ದಾಳಿ ನಡೆಸಿದರು. ಇಲ್ಲಿ ಪ್ರಚಂಡ ಯುದ್ಧದ ನಂತರ ಅಲ್ಲಾಹನು ಮುಸ್ಲಿಮರಿಗೆ ವಿಜಯ ನೀಡಿದನು. ಹಝ್ರತ್ ಉಸ್ಮಾನ್ ಬಿನ್ ಅಬುಲ್‌ಆಸ್ ಯುದ್ಧ ಸಂಪತ್ತನ್ನು ಒಟ್ಟುಸೇರಿಸಿದರು ಮತ್ತು ಅದರ ಐದನೇ ಒಂದು ಭಾಗವನ್ನು ತೆಗೆದು ಅಮೀರುಲ್ ಮೂಅ್‌ಮಿನೀನ್ ಹಝ್ರತ್ ಉಮರ್(ರ)ರ ಸನ್ನಿಧಿಗೆ ಕಳುಹಿಸಿದರು. ಒಂದು ವರದಿಯ ಪ್ರಕಾರ ಅಸ್ತಖ್‌ರನ್ನು ಮೊದಲ ಬಾರಿಗೆ ಹಝ್ರತ್ ಅಲಾ ಬಿನ್ ಹಝ್ರಮಿ ಹಿಜರೀ 17ರಲ್ಲಿ ಜಯಿಸಿದ್ದರು.

ಹಝ್ರತ್ ಸಾರಿಯ ಬಿನ್ ಝ್ನೈಮ್‌ರನ್ನು ಹಿಜರೀ 23ರಲ್ಲಿ ಹಝ್ರತ್ ಉಮರ್(ರ) ಫಸಾ ಮತ್ತು ದಾರಾಬಜರ್ದಿನ ಕಡೆಗೆ ಕಳುಹಿಸಿದರು. ಹಝ್ರತ್ ಇಬ್ನು ಉಮರ್(ರ) ಹೇಳುತ್ತಾರೆ: ಒಂದು ದಿನ ಹಝ್ರತ್ ಉಮರ್(ರ) ಭಾಷಣ ಮಾಡುತ್ತಾ ಅಚಾನಕ್ಕಾಗಿ ಉಚ್ಚ ಸ್ವರದಲ್ಲಿ ಹೀಗೆ ಹೇಳಿದರು: ಯಾ ಸಾರಿಯ, ಅಲ್‌ಜಬಲ್, ಎಂದರೆ ಹೇ ಸಾರಿಯ, ಪರ್ವತದ ಕಡೆಗೆ ಸಾಗಿ ನಿಲ್ಲು. ಹಝ್ರತ್ ಮುಸ್ಲಿಹ್ ಮೌಊದ್(ರ) ಈ ಘಟನೆಯನ್ನು ವಿವರಿಸುತ್ತಾ ಹೇಳುತ್ತಾರೆ: ಈ ಪದಗಳಿಗೆ, ಎಂದರೆ ಸಾರಿಯ ಅಲ್‌ಜಬಲ್ ಎಂಬ ವಾಕ್ಯಕ್ಕೆ ಭಾಷಣದೊಂದಿಗೆ ಯಾವುದೇ ಸಂಬಂಧವಿಲ್ಲದ ಕಾರಣ ಜನರು ಅದರ ಬಗ್ಗೆ ಹಝ್ರತ್ ಉಮರ್‌ರೊಡನೆ ಪ್ರಶ್ನಿಸಿದರು. ಹಝ್ರತ್ ಉಮರ್(ರ) ಹೇಳಿದರು: ಇಸ್ಲಾಮಿನ ಸೈನ್ಯದ ಒಬ್ಬ ಸೇನಾಧಿಪತಿಯಾದ ಸಾರಿಯನ ಹಿಂದಿನಿಂದ ಶತ್ರುಗಳು ಆಕ್ರಮಣ ನಡೆಸಲು ಹೋಗುತ್ತಿರುವುದಾಗಿ ನಾನು ಕಂಡೆನು. ಸದ್ಯದಲ್ಲೇ ಇಸ್ಲಾಮಿನ ಸೈನ್ಯ ನಾಶವಾಗುವ ಸಾಧ್ಯತೆಯಿತ್ತು. ಆದ್ದರಿಂದ ನಾನು ಅವರೊಡನೆ "ಹೇ ಸಾರಿಯ, ಪರ್ವತದ ಕಡೆಗೆ ಹೋಗು" ಎಂದು ಉಚ್ಚ ಧ್ವನಿಯಲ್ಲಿ ಹೇಳಿದೆ. ಈ ಘಟನೆ ನಡೆದು ಹೆಚ್ಚು ದಿನವಾಗಿರಲಿಲ್ಲ, ಅಷ್ಟರಲ್ಲಿ ಸಾರಿಯರ ಕಡೆಯಿಂದ ಇದೇ ವಿಷಯದಲ್ಲಿ ಮಾಹಿತಿ ಬಂತು. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಆ ಸಮಯದಲ್ಲಿ ಹಝ್ರತ್ ಉಮರ್(ರ)ರ ನಾಲಗೆ ಅವರ ನಿಯಂತ್ರಣದಲ್ಲಿ ಇರಲಿಲ್ಲ. ಆ ಸರ್ವಶಕ್ತನಾದ ಅಲ್ಲಾಹನ ನಿಯಂತ್ರಣದಲ್ಲಿತ್ತು. ಅವನಿಗೆ ದೂರ ಒಂದು ವಿಷಯವಲ್ಲ. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಸಹಾಬರಿಗೆ ಇಲ್‌ಹಾಂ ಲಭಿಸಿರಲಿಲ್ಲವೆಂದು ಆಪಾದಿಸುವುದು ಅನುಚಿತ ಮತ್ತು ತಪ್ಪಾಗಿದೆ. ಹಝ್ರತ್ ಉಮರ್‌ರಿಗೆ ಸಾರಿಯದ ಸೈನ್ಯದ ಅಪಾಯಕಾರಿ ಸ್ಥಿತಿಯ ಬಗ್ಗೆ ಗೊತ್ತಾದದ್ದು ಇಲ್‌ಹಾಂ ಅಲ್ಲದೇ ಮತ್ತೇನು?

ಹಿಜರಿ 23ರಲ್ಲಿ ಹಝ್ರತ್ ಸುಹೈಲ್ ಬಿನ್ ಅದ್ದಿಯರ ಕೈಗಳಲ್ಲಿ ಕಿರ್ಮಾನ್ ಮೇಲೆ ವಿಜಯ ಸಾಧಿಸಲಾಯಿತು. ಅದೇ ರೀತಿಯಲ್ಲಿ ಹಿಜರೀ 23ರಲ್ಲಿ ಖುರಾಸಾನಿಗಿಂತ ದೊಡ್ಡ ಪ್ರದೇಶವಾದ ಸಬಹ್‌ಸ್ತಾನನ್ನು ಜಯಿಸಲಾಯಿತು. ಪ್ರಸಿದ್ಧ ಇರಾನಿ ಪಹಿಲ್ವಾನ ರುಸ್ತಂ ಇದೇ ಪ್ರದೇಶದವನಾಗಿದ್ದನು. ಮಕ್ರಾನಿನ ವಿಜಯ ಸಹ ಹಿಜರೀ 23ರದ್ದಾಗಿತ್ತು. ಇಲ್ಲಿ ಮುಸ್ಲಿಮರು ಸಿಂಧಿನ ಅರಸನ ವಿರುದ್ಧ ಒಟ್ಟುಸೇರಿ ಯುದ್ಧ ಮಾಡಿದರು ಮತ್ತು ಅವನನ್ನು ಸೋಲಿಸಿದರು. ಹಝ್ರತ್ ಉಮರ್ ಫಾರೂಖ್‌ರ ವಿಜಯಗಳ ಕೊನೆಯ ಸೀಮೆ ಇದೇ ಮಕ್ರಾನ್ ಆಗಿತ್ತು. ಇದು ಸರಿಯೆಂದಾದರೆ, ಹಝ್ರತ್ ಉಮರರ ಕಾಲದಲ್ಲಿ ಇಸ್ಲಾಮಿನ ಹೆಜ್ಜೆ ಸಿಂಧ್ ಮತ್ತು ಭಾರತದ ಮೇಲೆ ಬಂದಿತ್ತು ಎಂದಾಗುತ್ತದೆ.

(ಹಝ್ರತ್ ಉಮರ್(ರ)ರ ಖಿಲಾಫತ್ ಕಾಲದ ಪ್ರಸ್ತಾಪ ಮುಂದುವರೆಯುವುದು ಎಂದು ಹೇಳಿದ ನಂತರ ಹುಝೂರ್ ಒಂದು ಟರ್ಕಿಶ್ ಇಂಟರ್‌ನೆಟ್ ರೇಡಿಯೋದ ಉದ್ಘಾಟನೆ ಮಾಡುವುದಾಗಿ ಘೋಷಿಸಿದರು. ಈ ರೇಡಿಯೋದಿಂದ ಲೋಕದ 20ಕ್ಕಿಂತ ಹೆಚ್ಚು ರಾಷ್ಟ್ರಗಳು ಪ್ರಯೋಜನ ಪಡೆಯುವುವು. ಈ ರೇಡಿಯೋದ ತಯಾರಿಯ ಸೌಭಾಗ್ಯ ಜರ್ಮನಿಯ ತಬ್ಲೀಗ್ ವಿಭಾಗಕ್ಕೆ ಲಭಿಸಿದೆ. ಜರ್ಮನಿಯ ತಬ್ಲೀಗ್ ವಿಭಾಗದ ಈ ಪ್ರಯತ್ನವನ್ನು ಅಲ್ಲಾಹನು ಸ್ವೀಕರಿಸುತ್ತಾ ಈ ಹೊಸ ರೇಡಿಯೋವನ್ನು ಅಲ್ಲಾಹನು ಎಲ್ಲ ರೀತಿಯಲ್ಲಿ ಅನುಗ್ರಹಿಸಲಿ ಎಂದು ಹುಝೂರ್ ಪ್ರಾರ್ಥಿಸಿದರು).

(ಖುತ್ಬದ ಕೊನೆಯಲ್ಲಿ ಹುಝೂರ್ ಕೆಲವು ದಿವಂಗತರ ಬಗ್ಗೆ ಪ್ರಸ್ತಾಪಿಸಿದರು ಮತ್ತು ಜನಾಝ ಗ್ಹಾಇಬ್ ನಮಾಝ್ ನಿರ್ವಹಿಸುವುದಾಗಿ ಹೇಳಿದರು. ಸನ್ಮಾನ್ಯ ಸಯ್ಯದ್ ತಾಲಿಅ್ ಅಹ್ಮದ್ ಸಾಹಿಬ್‌ರ ಕುರಿತು ಹುಝೂರ್ ಹೀಗೆ ಹೇಳಿದರು:) ನಮ್ಮ ಪ್ರೀತಿಯ ತಾಲಿಅ್‌ರ ಜನಾಝ ಈಗ ತಲುಪಿಲ್ಲ. ಬಂದ ನಂತರ ಅವರ ಜನಾಝ ನಮಾಝ್ ನಿರ್ವಹಿಸಲಾಗುವುದು ಮತ್ತು ಅವರ ಕುರಿತು ಪ್ರಸ್ತಾಪಿಸಲಾಗುವುದು. ಇನ್‌ಶಾ ಅಲ್ಲಾಹ್.

(ಅನಂತರ ಖಲೀಫತುಲ್ ಮಸೀಹರು ಖಾದಿಯಾನಿನ ಮಸ್ಜಿದ್ ಅಖ್ಸಾ ಮತ್ತು ಮಸ್ಜಿದ್ ಮುಬಾರಕ್‌ನ ಮಾಜಿ ಖಾದಿಮ್ ಮಸ್ಜಿದ್ ಆಗಿದ್ದ ಸನ್ಮಾನ್ಯ ಮಹ್ಮೂದ್ ಅಹ್ಮದ್

ಸಾಹಿಬ್‌ರ ಬಗ್ಗೆ ಪ್ರಸ್ತಾಪಿಸಿದರು.) ಅವರು 74ನೇ ವಯಸ್ಸಿನಲ್ಲಿ ನಿಧನರಾದರು. ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್. ಅವರು ಕರ್ನಾಟಕದ ಬೆಳಗಾಮಿನಿಂದ ವಲಸೆಮಾಡಿ ಖಾದಿಯಾನಿಗೆ ಬಂದ ಸನ್ಮಾನ್ಯ ಮಖ್‌ದೂಮ್ ಹುಸೈನ್ ಸಾಹಿಬ್‌ರ ಮಗನಾಗಿದ್ದರು. 28 ವರ್ಷಗಳ ಕಾಲ ಮಸ್ಜಿದ್ ಅಖ್ಸಾ ಮತ್ತು ಮಸ್ಜಿದ್ ಮುಬಾರಕ್‌ನಲ್ಲಿ ಮಸ್ಜಿದ್ ಖಾದಿಮ್ ಆಗಿ ಸೇವೆ ಸಲ್ಲಿಸಲು ಸೌಭಾಗ್ಯ ಪಡೆದರು. ದಿವಂಗತರು ಮೂಸಿಯಾಗಿದ್ದರು. ಅವರು ಉಪವಾಸ ಮತ್ತು ನಮಾಝುನ್ನು ಪಾಲಿಸುವವರಾಗಿದ್ದರು. ತಹಜ್ಜುದ್ ನಿರ್ವಹಿಸುವ ಮತ್ತು ದುಆ ಮಾಡುವ ವ್ಯಕ್ತಿಯಾಗಿದ್ದರು. ಮಸೀದಿಯೊಂದಿಗೆ ಅವರಿಗೆ ವಿಶೇಷವಾದ ಬಾಂಧವ್ಯವಿತ್ತು. ದಿವಂಗತರು ಪತ್ನಿಯನ್ನಲ್ಲದೆ ಇಬ್ಬರು ಪುತ್ರರನ್ನು ಮತ್ತು ಒಬ್ಬಳು ಪುತ್ರಿಯನ್ನು ಅಗಲಿರುವರು.

(ಅನಂತರ ಹುಝೂರ್ ಕೇರಳದ ಅಬ್ದುರ್ರಹ್ಮಾನ್ ಸಾಹಿಬ್‌ರ ಪತ್ನಿಯಾದ ಸೌದ ಸಾಹಿಬರ ಬಗ್ಗೆ ಪ್ರಸ್ತಾಪಿಸಿದರು.) ಅವರು ಜೂಲಾಯಿ 22ರಂದು 76ನೇ ವಯಸ್ಸಿನಲ್ಲಿ ನಿಧನರಾದರು – ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್. ಅವರು ಕಬಾಬೀರಿನ ಮುಬಲ್ಲಿಗ್ ಇಂಚಾರ್ಜ್ ಆದ ಶಮ್ಸುದ್ದೀನ್ ಮಾಲಬಾರಿ ಸಾಹಿಬ್‌ರ ತಾಯಿಯಾಗಿದ್ದರು. ಶಮ್ಸುದ್ದೀನ್ ಸಾಹಿಬ್ ಹೇಳುತ್ತಾರೆ: ನನ್ನ ತಾಯಿ ಪಾಲಕ್ಕಾಡ್ ಜಿಲ್ಲೆ ಮತ್ತು ಸುತ್ತಮುತ್ತಲಿನ ಪ್ರದೇಶಗಳ ಮೊದಲ ಅಹ್ಮದಿಯಾಗಿದ್ದ ದಿವಂಗತ ವಿ.ಟಿ. ಮುಹಮ್ಮದ್ ಸಾಹಿಬ್‌ರ ಮಗಳಾಗಿದ್ದರು. ಮುಹಮ್ಮದ್ ಸಾಹಿಬರು 1937ರಲ್ಲಿ ಬೈಅತಿನ ಸೌಭಾಗ್ಯ ಪಡೆದಿದ್ದರು. ಅನಂತರ ದೀರ್ಘ ಕಾಲದ ವರೆಗೆ ಎದುರಾಳಿಗಳ ಕಡೆಯಿಂದ ತೀವ್ರತರದ ದೌರ್ಜನ್ಯಗಳನ್ನು ಎದುರಿಸುತ್ತಿದ್ದರು. ಮೌಲವಿ ಶಮ್ಸುದ್ದೀನ್ ಸಾಹಿಬ್ ಹೇಳುತ್ತಾರೆ: ಇದೇ ಬಹಿಷ್ಕಾರದ ಕಾಲದಲ್ಲಿ ನನ್ನ ಅಜ್ಜಿ ಮತ್ತು ಅವರ ಹಿರಿಯ ಮಗಳು ನಿಧನರಾದರು. ಆ ವೇಳೆ ನನ್ನ ತಾಯಿಗೆ ಒಂದುವರೆ ವರ್ಷ ಪ್ರಾಯವಾಗಿತ್ತು. ನಿಧನದ ನಂತರ ಎದುರಾಳಿಗಳು ಅಜ್ಜಿಯನ್ನು ದಫನ್ ಮಾಡಲು ಸಹ ಬಿಡಲಿಲ್ಲ. ಆದ್ದರಿಂದ ನಲ್ವತ್ತು ಕಿಲೋಮೀಟರ್ ದೂರದ ಪಟ್ಟಣದ ಒಂದು ಸಾಮಾನ್ಯ ಖಬರಿಸ್ತಾನಿನಲ್ಲಿ ದಫನ್ ಮಾಡಬೇಕಾಯಿತು. ನನ್ನ ಅಜ್ಜ ತನ್ನ ಕಿರಿವಯಸ್ಸಿನ ಮಗಳೊಂದಿಗೆ ಹಿಜ್ರತ್ ಮಾಡಿದರು. ಹೀಗೆ ನನ್ನ ತಾಯಿ ಸಣ್ಣ ವಯಸ್ಸಿನಿಂದಲೇ ಅನೇಕ ತರದ ಪರೀಕ್ಷಣೆಗಳಿಂದ ಸಾಗುತ್ತಿದ್ದರು. ದಿವಂಗತ ತಾಯಿ ಉಪವಾಸ ಮತ್ತು ನಮಾಝುನ್ನು ಪಾಲಿಸುವವರಾಗಿದ್ದರು ಹಾಗೂ ಮೂಸಿಯಾಗಿದ್ದರು. ಸೃಷ್ಟಿಗಳೊಂದಿಗೆ ಸಹಾನುಭೂತಿ ಅವರೊಳಗೆ ತುಂಬಿತ್ತು. ಕಷ್ಟತೆಗೆ ಒಳಗಾದ ಪ್ರತಿಯೊಬ್ಬ ವ್ಯಕ್ತಿಗಾಗಿ ದುಆ ಮಾಡುವುದು ಮತ್ತು ಅವರು ಮುಂದಿದ್ದರೆ ಅವರಿಗೆ ಸಹಾಯ ಮಾಡುವುದು ಅವರ ಅಭ್ಯಾಸವಾಗಿತ್ತು. ದಿವಂಗತರು ಪತಿಯನ್ನಲ್ಲದೆ ನಾಲ್ವರು ಪುತ್ರರನ್ನು ಮತ್ತು ಇಬ್ಬರು ಪುತ್ರಿಯರನ್ನು ಅಗಲಿರುವರು. ಅವರ ಮೊಮ್ಮಗ ಸಹ ವಖ್‌ಫೇ ಝಿಂದಗಿ ಆಗಿರುವರು ಮತ್ತು ಮಗನು ಮುಬಲ್ಲಿಗ್ ಆಗಿರುವರು. ಅವರಿಗೆ ಹೊರದೇಶದಲ್ಲಿರುವ ಕಾರಣ ಜನಾಝುಗಾಗಿ ಹಾಜರಾಗಲು ಸಾಧ್ಯವಾಗಿರಲಿಲ್ಲ. ಅಲ್ಲಾಹನು ದಿವಂಗತರ ಪದವಿಗಳನ್ನು ಉನ್ನತಗೊಳಿಸಲಿ – ಆಮೀನ್.

(ಅವರಲ್ಲದೆ ಖಲೀಫತುಲ್ ಮಸೀಹರು ಮರಾಕಿಶಿನ ಸನ್ಮಾನ್ಯ ಮುಹಮ್ಮದ್ ಅಲ್‌ಮುಖ್ತಾರ್ ಕಬ್‌ಕಾ ಸಾಹಿಬ್ ಮತ್ತು ಫೈಸಲಾಬಾದಿನ ಶೇಖ್ ಅಬ್ದುಲ್‌ಮಜೀದ್ ಸಾಹಿಬ್‌ರ ಪತ್ನಿಯಾದ ಸನ್ಮಾನ್ಯ ಸಯ್ಯಿದ ಮಜೀದ್ ಸಾಹಿಬ ಅವರ ಬಗ್ಗೆ ಪ್ರಸ್ತಾಪಿಸಿದರು. ಹುಝೂರ್ ಎಲ್ಲ ದಿವಂಗತರ ಮಗ್‌ಫಿರತ್ ಮತ್ತು ಉನ್ನತ ಪದವಿಗಳಿಗಾಗಿ ದುಆ ಮಾಡಿದರು.)

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّاٰتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِىَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاۤءِ ذِى الْقُرْبٰى
وَيَنْهٰى عَنِ الْفَحْشَاۤءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوااللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis(atba)***

*At, Masjid Mubarak, Islamabad, Tilford, UK, On 27-08-2021*

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim |***Layout**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email**:* *khutuba.kannada@gmail.com*

**You can find all the Sermons archived at**: www.alislam.org/friday-sermon